ಸಾಕ್ಷಿಯನ್ನು ದಿನಾಂಕಃ 24.11.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್ ಎಸ್ ವಕೀಲರಿಂದ

ವಾದಿ ನನ್ನ ಗಂಡ, ನನ್ನ ಗಂಡನಿಗೆ ಎರಡು ವರ್ಷಗಳಿಂದ ತಲೆನೊವು ಮತ್ತು ಜ್ಞಾಪನ ಶಕ್ತಿ ಇರುವುದಿಲ್ಲ. ನಾನು ವಾದಿಯಿಂದ 2025 ರಲ್ಲಿ ಅಧಿಕಾರಪತ್ರ ಪಡೆದಿರುತ್ತೇನೆ. ನಿಪಿ22 ರ ಅಧಿಕಾರಪತ್ರದಲ್ಲಿ ನನ್ನ ಗಂಡನಿಗೆ ತಲೆನೋವು ಮತ್ತು ಜ್ಞಾಪಕ ಶಕ್ತಿ ಇಲ್ಲದೇ ಇರುವ ಬಗ್ಗೆ ಬರೆದಿರುತ್ತಾರೆ. ನಾನು ನನ್ನ ಗಂಡನಿಗೆ ತಲೆನೋವು ಮತ್ತು ಜ್ಞಾಪಕ ಶಕ್ತಿ ಇಲ್ಲದೇ ಇರುವ ಬಗ್ಗೆ ವೈದ್ಯಕೀಯ ದಾಖಲೆ ಕೊಟ್ಟಿಲ್ಲ. ನನ್ನ ಗಂಡನಿಗೆ ಯಾವುದೇ ರೀತಿಯ ಸಮಸ್ಯೆ ಇಲ್ಲದೇ ಇದ್ದರೂ ಸಹ ಅವರ ಪರವಾಗಿ ಅಧಿಕಾರ ಪತ್ರ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ.

2. ನನ್ನ ಗಂಡ ಪ್ರತಿವಾದಿಗಳಿಗೆ ಸ ನಂ 21 ರ 2 ಎಕರೆ ಮೇಲೆ ದಾವೆ ಹಾಕಿರುತ್ತಾರೆ. ದಾವಸ್ವತ್ತಿನ ಉತ್ತರಕ್ಕೆ ಪ್ರತಿವಾದಿಗಳ ಆಸ್ತಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಗಳು ಉತ್ತರಕ್ಕಿರುವ ಜಮೀನಿನಲ್ಲಿ ಏನು ಬೆಳೆ ಇಟ್ಟಿರುತ್ತಾರೆಂದರೆ ಯಾವುದೇ ಬೆಳೆ ಹಾಕಿರುವುದಿಲ್ಲ. ಸಾಕ್ಷಿಯು ಭಾವಚಿತ್ರದಲ್ಲಿ ಕಾಣುವ ಮುಳ್ಳು ತಂತಿ ಹಾಕಿರುವ ಜಮೀನು ನಮ್ಮ ಜಮೀನು ಆಗಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಭಾವಚಿತ್ರಗಳನ್ನು ಸಾಕ್ಷಿಯು ಒಪ್ಪಿ ಕೊಂಡಿರುವುದರಿಂದ ಕಲಂ 65 ಬಿ ರ ಸಾಕ್ಷಿ ಅಧಿನಿಯಮಕ್ಕೆ ಒಳಪಟ್ಟು ನಿಡಿ1, 2 ಎಂದು ಗುರುತಿಸಲಾಯಿತು. ನಿಡಿ1, 2 ರ ಭಾವಚಿತ್ರದಲ್ಲಿ ಕಾಣುವ ತಂತಿ ಬೇಲಿ ಒಳಗಡೆ ದಾಳಿಂಬೆ ಗಿಡಗಳನ್ನು ಹಾಕಿರುತ್ತೇನೆಂದರೆ ಸರಿ. ಸದರಿ ತಂತಿ ಬೇಲಿ ಯನ್ನು 2019 ರಲ್ಲಿ ಹಾಕಿರುತ್ತಾರೆಂದರೆ ಗೊತ್ತಿಲ್ಲ. ನಿಪಿ14 ರ ಸರ್ವೆ ಸ್ಕೆಚ್ ಬಗ್ಗೆ ಗೊತ್ತಿರುವುದಿಲ್ಲ, ಸಾಕ್ಷಿಯು ನಾನು ಓದಿಲ್ಲ ಎಂದು ನುಡಿಯುತ್ತಾರೆ. ನಿಪಿ14 ರ ಸರ್ವೆ ಸ್ಕೆಚ್ ನಂತೆ ಉತ್ತರದಿಂದ ಪಶ್ಚಿಮದ ಕಡೆಗೆ ಪ್ರತಿವಾದಿ ಜಮೀನಿಗೆ ನಮ್ಮ ಜಮೀನಿನಲ್ಲಿ ಹೋಗುತ್ತಿದೆ ಎಂದರೆ ಸರಿ. 2019 ರಲ್ಲಿ ಪಂಚಾಯ್ತಿ ಮೂಲಕ ನಮ್ಮ ಜಮೀನು ಮತ್ತು ಪ್ರತಿವಾದಿ ಜಮೀನು ಅದಲು-ಬದಲು ಆಗಿ ನೇರವಾಗಿ ಇಟ್ಟುಕೊಂಡಿರುತ್ತೇವೆಂದರೆ ಸರಿಯಲ್ಲ. ನನ್ನ ಗಂಡನಾದ ವಾದಿಯ ಸಹಿ ನೋಡಿರುವುದಿಲ್ಲ. ಸದರಿ ಪಂಚಾಯ್ತಿಯ ಅದಲುಬದಲು ಪತ್ರದಲ್ಲಿ ನನ್ನ ಗಂಡ 7 ½ ಗುಂಟೆ 1 ನೇಪ್ರತಿವಾದಿಗೆ ಮತ್ತು 1 ನೇ ಪ್ರತಿವಾದಿ ನನ್ನ

ಗಂಡನಿಗೆ 5 ¼ ಗುಂಟೆ ಜೊತೆಗೆ 60 ಸಾವಿರ ರೂ. ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನನ್ನ ಜಮೀನಿಗೆ ತಂತಿ ಬೇಲಿಯನ್ನು 4-5 ವರ್ಷಗಳ ಹಿಂದೆ ಹಾಕಿರುತ್ತೇನೆ.

3. ನನಗೆ ಅದಲುಬದಲು ಪತ್ರದ ಬಗ್ಗೆ ಗೊತ್ತಿಲ್ಲ. ಮೂಲ ಅದಲುಬದಲು ಪತ್ರದ ಸಹಿ ನನ್ನ ಗಂಡ ಮಾಡಿರುವ ಬಗ್ಗೆ ಗೊತ್ತಿಲ್ಲ. ಅದಲುಬದಲು ಪತ್ರದ ವೆಂಕಟೇಶ್ ಮತ್ತು ಷಣ್ಮುಗಂ ನಮ್ಮ ಊರಿನವರು ಆಗಿರುವುದರಿಂದ ಪರಿಚಯ ಇರುತ್ತಾರೆ. ಅದಲುಬದಲು ಪತ್ರದಲ್ಲಿರುವ ಸಹಿಯನ್ನು ನನ್ನ ಗಂಡ ಗುರುತಿಸಬೇಕಾಗುತ್ತದೆ ಎನ್ನುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಾನು ನಿಡಿ1, 2 ರ ಭಾವಚಿತ್ರದಲ್ಲಿ ಹಾಕಿರುವ ತಂತಿಬೇಲಿ ಒಳಗೆ ಇರುವ ಜಮೀನಿನಲ್ಲಿ ದಾಳಿಂಬೆ ಗಿಡಗಳನ್ನು ಹಾಕಿ ಸ್ವಾಧೀನದಲ್ಲಿರುವುದಕ್ಕೆ ಯಾವುದೇ ತಕರಾರು ಇರುವುದಿಲ್ಲ, ಸಾಕ್ಷಿ ಮುಂದುವರೆದು ಪ್ರತಿವಾದಿಗಳು ನಾನು ಹಾಕಿರುವ ದಾಳಿಂಬೆ ಗಿಡಗಳನ್ನು ಹೊಡೆದು ಹಾಕಿರುವ ಕಾರಣ ನಾನು ಹಾಲಿ ದಾವೆ ಹಾಕಿರುತ್ತೇನೆ. ಸದರಿ ದಾಳಿಂಬೆ ಗಿಡಗಳನ್ನು ಕೇಸು ಹಾಕಿದ ನಂತರ ಹೊಡೆದು ಹಾಕಿರುತ್ತಾರೆ. ದಾವೆ ನಡೆಯುವಾಗ ದಾಳಿಂಬೆ ಗಿಡಗಳನ್ನು ಪ್ರತಿವಾದಿಗಳು ಹೊಡೆದು ಹಾಕಿಲ್ಲ ಎಂದರೆ ಸರಿಯಲ್ಲ.

4. ಹಾಲಿ ದಾವೆಯನ್ನು ನನ್ನ ಗಂಡ 6 ಗುಂಟೆ ಬರಬೇಕೆಂದು ಹಾಕಿರುತ್ತಾರೆ. ನಮಗೆ ಸೇರಿದ 6 ಗುಂಟೆ ಜಮೀನು ಸರ್ವೆ ಮಾಡುವ ಮೊದಲು ಮತ್ತು ನಂತರ ಪ್ರತಿವಾದಿಗಳು 2019 ರಲ್ಲಿ ತೆಗೆದುಕೊಂಡಿರುತ್ತಾರೆ. ವಾದಿಗೂ ಮತ್ತು ಪ್ರತಿವಾದಿಗೂ 2019 ರಲ್ಲಿ ಅದಲುಬದಲು ಪತ್ರದಂತೆ ಜಮೀನು ಅದಲುಬದಲು ಆಗಿರುತ್ತದೆ ಎಂದರೆ ಸರಿಯಲ್ಲ. ಹಾಲಿ ದಾವೆಯಲ್ಲಿ 6 ಗುಂಟೆ ಜಮೀನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆಂದು ಹೇಳಿ ಬರೆಸಿರುತ್ತೇನೆ. ನಾನು ಹೇಳಿದಂತೆ ಪ್ರತಿವಾದಿಗಳು ಯಾವುದೇ ಆಸ್ತಿಯನ್ನು ಒತ್ತುವರಿ ಮಾಡದೇ ಇದ್ದರೂ ಸಹ ಅದಲುಬದಲು ಪತ್ರದಂತೆ ಸ್ವಾಧೀನದಲ್ಲಿರುತ್ತೇವೆಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ತೊಂದರೆ ಕೊಡದೇ ಇದ್ದರೂ ಸಹ ವಾದಿ ಸುಳ್ಳು ದಾವೆ ಹಾಕಿರುತ್ತಾರೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಕೆಜಿಎಫ್.